ದಿನಾಂಕಃ 21-07-2018

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

ನಾನು 30 ವರ್ಷದಿಂದ ಸಿದ್ದನಮಠ ಗ್ರಾಮದಲ್ಲಿ ಪೋಸ್ಟ ಮನ್ ಆಗಿ ಕೆಲಸ ಮಾಡುತ್ತಿರುತ್ತೇನೆ. ಮೃತ ಹಾಲಪ್ಪನವರು ಸಲ್ಲಿಸಿದ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಸೇರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ನಿಜ. ಸದರಿ ದಾವೆಯಲ್ಲಿ ಇರುವ ಎಲ್ಲಾ ವಿಚಾರಗಳು ನನಗೆ ಗೊತ್ತಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮಾಡಿದ ದಾನ ಪತ್ರವನ್ನು ಹಾಗೂ 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಮಾಡಿದ ಕ್ರಯ ಪತ್ರವನ್ನು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಸದರಿ ದಾಖಲೆಗಳ ವಿಚಾರ 2015 ನೇ ಇಸವಿಯಲ್ಲಿ ಗೊತ್ತಾಯಿತು ಆದ್ದರಿಂದ ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. 2015 ನೇ ಇಸವಿಯ ನಂತರ ಸದರಿ ಪತ್ರಗಳನ್ನು ರದ್ದುಪಡಿಸುವಂತೆ ನ್ಯಾಯಲಯಕ್ಕೆ ನಾನು ದಾವೆ ಹೂಡಿರುವುದಿಲ್ಲ. ದಾವೆಯ 1 ನೇ ಷೆಡ್ಯೂಲ್ ಸ್ವತ್ತು ಪ್ರತಿವಾದಿಗಳ ತಂದೆ ಭೀಮಪ್ಪನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಭೀಮಪ್ಪ ನವರು ದಿಃ 25/6/1974 ರಂದು ಕರಿಯಮ್ಮ ಮತ್ತು ಹಾಗೂ ಹನುಮಪ್ಪನವರಿಂದ ದೃಡೀಕೃತ ಕ್ರಯಪತ್ರದ ಮುಖಾಂತರ 3,000/- ರೂ ಹಣಕ್ಕೆ ಕೊಂಡು ಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ 1974 ರಿಂದ ಪ್ರತಿವಾದಿಗಳು ಮಾತ್ರ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ದಾವೆಯ 1 ನೇ ಷೆಡ್ಯೂಲ್ ಸ್ವತ್ತಿನ ದಕ್ಷಿಣ ಭಾಗಕ್ಕೆ ನಮ್ಮ ಮನೆ ಇರುತ್ತದೆ.

ನಿಶಾನೆ ಪಿ 2 ರಲ್ಲಿ ಸ್ವತ್ತಿನ ಸಂಖ್ಯೆ ನಮೂದಾಗಿಲ್ಲ ಎಂದರೆ ನಿಜ. ನಿಶಾನೆ ಪಿ 3 ರ ದಾಖಲೆ ಬೀಮಪ್ಪನವರ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ.ಸದರಿ ಸ್ವತ್ತಿಗೆ ಕಂದಾಯವನ್ನು ಭೀಮಪ್ಪನವರು ಕಟ್ಟಿರುತ್ತಾರೆ ಎಂದರೆ ನಿಜ. ದಾವಾಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಪತ್ರಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಾರಸುದಾರನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ